**ಚಾಸಾ-5 ಪ್ರಾ ಸಾ-1**

**3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,**

**ಬೆಂಗಳೂರು ನಗರ.**

**ಸಿಸಿ. 5241/2020**

**ಚಾಸಾ- 5 ಪ್ರಾ ಸಾ-1**

| | |
|---|---|
| **ಸಾಕ್ಷಿದಾರರ ಹೆಸರು** | ಬಿ . ಮುನಿರಾಜು |
| **ತಂದೆಯ ಹೆಸರು** | ಎಲ್.ಬಸಪ್ಪ |
| **ವಯಸ್ಸು** | 66 ವರ್ಷ |
| **ಉದ್ಯೋಗ** | ನಿವೃತ್ತ ಪಿಎಸ್ ಐ |
| **ವಾಸ** | ಮೈಲಸಂದ್ರ, ಬೆಂಗಳೂರು. |
| **ಪ್ರಮಾಣೀಕರಿಸಿದ ದಿನಾಂಕ** | 13.02.2024. |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನಾನು 2015 ರಿಂದ 2018 ರವರೆಗೂ ನಾನು ಅಡುಗೋಡಿ ಪೊಲೀಸ್ ಠಾಣೆಯಲ್ಲಿ ಪಿಎಸ್ ಐ ಅಂತ ಕರ್ತವ್ಯ ನಿರ್ವಹಿಸಿದ್ದೇನೆ. ದಿ.25.10.2016 ರಂದು ಆಡಗೋಡಿ ಪೊಲೀಸ್ ಠಾಣೆಯಲ್ಲಿ ಠಾಣಾ ಪ್ರಭಾರದಲ್ಲಿದ್ದಾಗ 01.30 ಗಂಟೆಗೆ ಚಾಸಾ-1 ಕೆ. ರಾಮಪ್ಪ , ಉಪನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯವರು ಬಂದು ಶೇಖರ್ ಎನ್ನುವವರು ವಿರುದ್ದ ಗಣೀಕೃತ ಮಾಡಲಾದ ದೂರು ನೀಡಿದ್ದು ನಾನು ಅದನ್ನು ಸ್ವೀಕರಿಸಿ ನಾನು ಠಾಣಾ ಮೊಕದ್ದಮೇ ಸಂಖ್ಯೆ:276/2002 ರಲ್ಲಿ ಪ್ರಕರಣ ದಾಖಲಿಸಿ ಕಲಂ.468, 471, 420 ಭಾರತೀಯ ದಂಡ ಸಂಹಿತೆ ಮತ್ತು ಕಲಲಂ.3 ಮತ್ತು 7 ಪಿಸಿ ಆ್ಯಕ್ಟ್ ಹಾಗೂ ನಿಯಮ 18 ಕೆ ಇಸಿಪಿ ಆದೇಶ 1992 ರ ಉಲ್ಲೇಖ ಯಾದ ಪ್ರಕಾರ ಪ್ರ.ವ. ವರದಿ ದಾಖಲಿಸಿ ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ದೂರನ್ನು ನೋಡಿದರೇ ಗುರುತಿಸುತ್ತೇನೆ. ಈ ನಾನು ನೋಡುತ್ತಿರುವ ದೂರು ಚಾಸಾ-1 ರವರಿಂದ ಪಡೆದುಕೊಂಡ ದೂರಾಗಿರುತ್ತದೆ. ಅದರ ಮೇಲೆ ನನ್ನ ಸಹಿ ಇರುತ್ತದೆ. ಅದನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ದಾಖಲೆ ನಾನು ದಾಖಲಿಸಿದ ಪ್ರ.ವ.ವರದಿಯಾಗಿರುತ್ತದೆ. ಅದರಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ನಿಪಿ.2 ಎಂದು, ಸಾಕ್ಷಿ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಅದೇ ದಿನ ಸ್ಥಳಕ್ಕೆ ಭೇಟಿ ನೀಡಿ ರಮೇಶ್ ಮತ್ತು ವಿಜಯ್ ರವರನ್ನು ಸ್ಥಳಕ್ಕೆ ಬರಮಾಡಿಕೊಂಡು ಚಾಸಾ-1 ರವರು

ತೋರಿಸಿದ ಸ್ಥಳದಲ್ಲಿ ಪಂಚನಾಮೆಯನ್ನು ಮಧ್ಯಾಹ್ನ 03.00 ಗಂಟೆಯಿಂದ 04.00 ಗಂಟೆವರೆಗೆ ಜರುಗಿಸಿರುತ್ತೇನೆ. ಈಗ ನಾನು ನೋಡುತ್ತಿರುವ ದಾಖಲೆ ನಾನು ಸ್ಥಳದಲ್ಲಿ ಮಾಡಿದ ಪಂಚನಾಮೆ ಯಾಗಿದ್ದು ಅದನ್ನು ನಿಪಿ.3 ಎಂದು , ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮೂಲ ದಾಖಲಾತಿಗಳು ಕಡತದಲ್ಲಿ ಲಭ್ಯವಿಲ್ಲದೇ ಇರುವ ಕಾರಣ ಮತ್ತು ತನಿಖಾಧಿಕಾರಿ ಹಾಜರುಪಡಿಸದೇ ಇರುವ ಕಾರಣ ಮುಂದುವರೆದ ಮುಖ್ಯ ವಿಚಾರಣೆಗೆ ಹಿ.ಸ.ಸ.ಅ ರವರು ಕಾಲವಕಾಶ ಕೋರಿರುತ್ತಾರೆ. ನೀಡಲಾಯಿತು. )

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)**

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**